## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1527/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಮಹೇಶ್ವರಪ್ಪ | CW: 4 | PW: 4 |
| ತಂದೆಯ ಹೆಸರು | : | ಮಲ್ಲಪ್ಪ | | |
| ವಯಸ್ಸು | : | 70 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಸುರಹೊನ್ನೆ | | |

ದಿನಾಂಕಃ 23.07.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 1 ರಿಂದ 3 ಮತ್ತು 5 ರಿಂದ 8 ರವರು ಗೊತ್ತು. 2020 ನೇ ವರ್ಷ 4 ನೇ ತಿಂಗಳಿನಲ್ಲಿ ಚಾಸಾ 1 ರವರ ಮನೆಯ ಹಿಂದುಗಡೆ ಸಂಜೆ 7.15 ರಿಂದ 7.30 ರ ಸಮಯದಲ್ಲಿ ಗಲಾಟೆ ನಡೆಯುತ್ತಿತ್ತು. ನಾನು ಹೋಗುವಷ್ಟರಲ್ಲಿ ಅರ್ಧ ಜಗಳ ಆಗಿ ಹೋಗಿತ್ತು. ನಾನು ಹೋದಾಗ 2 ನೇ ಆರೋಪಿಯು ಚಾಸಾ 1 ರವರಿಗೆ ಹೊಡೆದ. 1 ನೇ ಆರೋಪಿಯು ಕುಡುಗೋಲಿನಿಂದ ಚಾಸಾ 1 ರವರ ತಲೆಗೆ ಹೊಡೆದ. ಆಗ ನಾನು, ಚಾಸಾ 3 ಮತ್ತು 5 ರವರು ಜಗಳ ಬಿಡಿಸಿ ಗಾಯಾಳುವನ್ನು ನ್ಯಾಮತಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು. ಆಗ ನ್ಯಾಮತಿಯಲ್ಲಿ ಆಗಲ್ಲ ಎಂದು ಹೇಳಿದ್ದಕ್ಕೆ ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಗೆ ಚಾಸಾ 3 ರವರು ಗಾಯಾಳುವನ್ನು ಕರೆದುಕೊಂಡು ಹೋಗಿರುತ್ತಾರೆ. ಈ ಸಂಬಂಧ ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯು ಗೈರು ಹಾಜರಿದ್ದು ಆರೋಪಿಯ ಗುರುತಿಸುವಿಕೆಗಾಗಿ ಆರೋಪಿ ಪರ

ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ಜಗಳ ಬಿಡಿಸಲು ಹೋದ ಚಾಸಾ 2 ರವರಿಗೆ ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದು, ಚಾಸಾ 1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಈ ಸಂಬಂಧ ಪೋಲೀಸರು ದಿಃ 12.04.2020 ರಂದು ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ 7 ರವರ ಸಮಕ್ಷಮ ಬೆಳಗ್ಗೆ 10.30 ರಿಂದ 11.30 ರ ಸಮಯದಲ್ಲಿ ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ 3 ರಂತೆ ಕಚ್ಚಾ ನಕಾಶೆ ತಯಾರಿಸಿ, ನಿಪಿ 4 ರಂತೆ ಪೋಟೋ ತೆಗೆಸಿ, ನಿಪಿ 2 ಮತ್ತು 3 ಕ್ಕೆ ನಮ್ಮಿಂದ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ನಿಪಿ 2 ಮತ್ತು 3 ರ ದಾಖಲೆಗಳಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ) ಮತ್ತು 3(ಬಿ) ಎಂದು ಗುರುತಿಸಲಾಯಿತು. ನಿಪಿ 4 ರ ಪೋಟೋದಲ್ಲಿ ತನ್ನನ್ನು ನೋಡಿ ಗುರುತಿಸಿಕೊಂಡಿರುತ್ತಾರೆ.

ಪಾಟೀ ಸವಾಲುಃ– ಆರೋಪಿಗಳ ಪರ ಶ್ರೀ.ಜಿ ಎಸ್ ಕೆ ವಕೀಲರಿಂದಃ–

ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆ ಚಾಸಾ 1 ರವರು ಬಂದಿರುತ್ತಾರೆ ಎಂದರೆ ಸರಿ. ಚಾಸಾ 1 ರವರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಆಚೆಕಡೆ ನನಗೆ ಯಾವ ರೀತಿಯ ಸಾಕ್ಷ್ಯ ಹೇಳಬೇಕು ಎಂದು ನನಗೆ ಹೇಳಿ ಕೊಡುತ್ತಿದ್ದರು ಎಂದರೆ ಸಾಕ್ಷಿಯು ಚಾಸಾ 1 ರವರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಆದರೆ ಸಾಕ್ಷ್ಯ ವಿಚಾರಣೆಯ ಬಗ್ಗೆ ಏನು ಹೇಳಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 2020 ರಲ್ಲಿ ನನಗೆ ಬಹಳ ದನ–ಕರುಗಳು ಇದ್ದವು ಎಂದರೆ ಸಾಕ್ಷಿಯು 5 ಹಾಲು ಕೊಡುವ ಹಸುಗಳು ಇದ್ದವು ಎಂದು ನುಡಿಯುತ್ತಾರೆ. ಘಟನಾ ಸಮಯದಲ್ಲಿ ನಿಮ್ಮ ಗ್ರಾಮದಲ್ಲಿ ಸಂಜೆ ಡೈರಿಗೆ ಹಾಲು ಹಾಕುವ ಸಮಯ ಯಾವುದು ಎಂದರೆ ಸಾಕ್ಷಿಯು ಸಂಜೆ 6.30 ರಿಂದ 7.30 ಎಂದು ನುಡಿಯುತ್ತಾರೆ. ನನಗೆ ಹಸುಗಳು ಹಾಲು

ಕರೆಯಲು ಸುಮಾರು 1 ಗಂಟೆ ಬೇಕಾಗುತ್ತದೆ ಎಂದರೆ ಸಾಕ್ಷಿ 1/2 ಗಂಟೆ ಸಾಕು ಎಂದು ನುಡಿಯುತ್ತಾರೆ. ನಾನು ಹಾಲು ಹಾಕಿ ಮನೆಗೆ ವಾಪಾಸ್ ಬರಲು ಸುಮಾರು 1 ಗಂಟೆ ಬೇಕಾಗುತ್ತದೆ ಎಂದರೆ ಸಾಕ್ಷಿಯು 1/2 ಗಂಟೆ ಆಗುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ನಾನು ಪ್ರತಿದಿನ ಸಂಜೆ 6.30 ಗಂಟೆ ಮೇಲೆನೆ ಹಾಲು ಕರೆಯುತ್ತೇನೆ ಎಂದರೆ ಸರಿ. ಹಾಲು ಕರೆದು, ಹಾಲನ್ನು ಡೈರಿಗೆ ಹಾಕಿ ನಂತರ ನಾನು ಮನೆಗೆ ವಾಪಾಸ್ ಬರುವ ಹೊತ್ತಿಗೆ ಸಂಜೆ 6.30 ರಿಂದ 8 ಗಂಟೆ ಆಗುತ್ತದೆ ಎಂದರೆ ಸಾಕ್ಷಿಯು 15 ನಿಮಿಷ ಹೆಚ್ಚು ಕಡಿಮೆ ಆಗಬಹುದು ಎಂದು ನುಡಿಯುತ್ತಾರೆ.

ಘಟನಾ ದಿನಾಂಕದಂದು, ಘಟನಾ ಸಮಯದಲ್ಲಿ ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ ಹಾಲು ತೆಗೆದುಕೊಂಡು ಡೈರಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ನನ್ನ, ಚಾಸಾ 1 ರಿಂದ 3 ಮತ್ತು 5 ರವರ ಮನೆತನದ ಹೆಸರು ಗಡೇಕಟ್ಟೇರ ಮನೆ ಎಂದು ಕರೆಯುತ್ತಾರೆ ಎಂದರೆ ಸರಿ. ಚಾಸಾ 2 ನನಗೆ ಏನಾಗಬೇಕು ಎಂದರೆ ನನ್ನ ತಮ್ಮನ ಹೆಂಡತಿ. ಚಾಸಾ 1 ಮತ್ತು 3 ರವರು ನನಗೆ ಮಕ್ಕಳಾಗಬೇಕು ಎಂದರೆ ಸರಿ. ನಮ್ಮ ಮತ್ತು ಚಾಸಾ 1 ರವರ ಮನೆಗಳು ಅಕ್ಕಪಕ್ಕದಲ್ಲಿರುತ್ತವೆ ಎಂದರೆ ಸಾಕ್ಷಿಯು ನಮ್ಮ ಮನೆಗಳ ಮಧ್ಯೆ ಆರೋಪಿಗಳ ಮನೆ ಇದೆ ಎಂದು ನುಡಿಯುತ್ತಾರೆ. ನಮ್ಮ, ಚಾಸಾ 2 ಮತ್ತು ಆರೋಪಿಗಳ ಮನೆಗಳ ಹಿಂದೆ ಖಾಲಿ ಜಾಗ ಇದೆ ಎಂದರೆ ಸರಿ. ನಾನು ಮತ್ತು ಚಾಸಾ 1 ರಿಂದ 3 ರವರು ಆರೋಪಿಗಳ ಜಾಗವನ್ನು ಕಬಳಿಸುವ ಉದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಡಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಡೆದಿದೆ ಎನ್ನಲಾದ ಗಲಾಟೆಯು ಯಾವ ಸಮಯದಿಂದ ಆರಂಭವಾಗಿ ಯಾವ ಸಮಯದಿಂದ ಮುಗಿದಿರುತ್ತದೆ ಎಂದರೆ ಸಾಕ್ಷಿಯು ಸಂಜೆ 6.45 ರಿಂದ 7.30 ಎಂದು ನುಡಿಯುತ್ತಾರೆ. ನಾವು ಯಾವ ಸಮಯಕ್ಕೆ ಗಲಾಟೆ ಬಿಡಿಸಿರುತ್ತೇವೆ ಎಂದರೆ ಸಾಕ್ಷಿಯು ಸಂಜೆ 7.45 ಎಂದು ನುಡಿಯುತ್ತಾರೆ. ಜಗಳ ಬಿಡಿಸಿದ ನಂತರ ಎಷ್ಟು ಸಮಯ ಘಟನಾ ಸ್ಥಳದಲ್ಲಿ ಇದ್ದೆ ಎಂದರೆ ನಾನ ಗಲಾಟೆ ಬಿಡಿಸಿ ಹೋಗಿಬಿಟ್ಟೆ ಎಂದು ನುಡಿಯುತ್ತಾರೆ. ಘಟನಾ ಸಮಯದಲ್ಲಿ ಘಟನಾ ಸ್ಥಳದಲ್ಲಿ ವಿದ್ಯುತ್ ವ್ಯವಸ್ಥೆ ಇರಲಿಲ್ಲ ಎಂದರೆ ಸರಿ. ಘಟನಾ ಸಮಯದಲ್ಲಿ ಕತ್ತಲಿದಿದ್ದರಿಂದ ಯಾರಿಗೆ ಯಾರು ಹೊಡೆದಿರುತ್ತಾರೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಗಲಾಟೆಯಿಂದ ಚಾಸಾ 1 ರವರು ಸುಧಾರಿಸಿಕೊಳ್ಳಲು ಎಷ್ಟು ಸಮಯ ತೆಗೆದುಕೊಂಡಿರುತ್ತಾರೆ ಎಂದರೆ 10 ರಿಂದ 15 ನಿಮಿಷ ಎಂದು ನುಡಿಯುತ್ತಾರೆ. ಚಾಸಾ 1 ರವರು ಯಾವ ಸಮಯಕ್ಕೆ ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ರಾತ್ರಿ 8 ಗಂಟೆಯ ನಂತರ ಎಂದು ನುಡಿಯುತ್ತಾರೆ. ಚಾಸಾ 1 ರಿಂದ 3 ರವರಿಗೆ

ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಘಟನಾ ದಿನಾಂಕದಂದು ಆರೋಪಿಗಳ ಮತ್ತು ಚಾಸಾ 1 ರವರ ನಡುವೆ ಗಲಾಟೆ ಆಗುತ್ತಿತ್ತು, 1 ನೇ ಆರೋಪಿಯು ಮು.ಮಾ 1 ರಿಂದ ಚಾಸಾ 1 ರವರ ತಲೆಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2 ನೇ ಆರೋಪಿಯು ಚಾಸಾ 1 ರವರಿಗೆ ಹೊಡೆದು, ಚಾಸ 1 ಮತ್ತು 2 ರವರಿಗೆ ಬೈದು, ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ 1 ರೀತಿಯ ಕುಡುಗೋಲು ನಮ್ಮ ಮನೆಯಲ್ಲಿ ಇದೆ ಎಂದರೆ ಸರಿ. ನಾನು ಮತ್ತು ಚಾಸಾ 1 ರಿಂದ 3 ರವರು ಸೇರಿ ಮು.ಮಾ 1 ನ್ನು ಜಮೀನಿನಲ್ಲಿ ಈ ಕೇಸಿಗೋಸ್ಕರ ಇಟ್ಟು ಬಂದಿದ್ದೇವೆ ಎಂದರೆ ಸರಿಯಲ್ಲ. ಮು.ಮಾ 1 ಕ್ಕೂ , ಈ ಕೇಸಿಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನ ಸಮಕ್ಷಮ ನಿಪಿ 2 ರಂತೆ ಸ್ಥಳ ಪಂಚನಾಮೆ ಮಾಡಿಲ್ಲ , ನಿಪಿ 3 ರಂತೆ ಕಚ್ಚಾ ನಕಾಶೆ ತಯಾರಿಸಿಲ್ಲ ಹಾಗೂ ನಿಪಿ 4 ರಂತೆ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ 3 ರವರು ಚಾಸಾ 1 ರವರನ್ನು ಚಿಕಿತ್ಸೆಗೆ ನ್ಯಾಮತಿ ಸರ್ಕಾರಿ ಆಸ್ಪತ್ರೆಗೆ ನಂತರ ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ಜಗಳ ಬಿಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.